SRI KAGOD THIMMAPPA (Minister for Public Works).—

(a) (1) Roads to the extent of 102.4 Kms. (64 Miles) have been formed in connection with rehabilitation of Sharavathy Valley Project.

(2) Talukwise particulars:

Taluk	No. of Roads	Length
Sagar	20	58.9 Kms,
Hosanagar	12	36.1 Kms.
Soraba	1	1.8 Kms.
Shimoga	1	5.6 Kms.
	34	102.4 Kms.

(b) Out of the 34 roads cited above, only 4 roads comes under the jurisdiction of Public Works Department and repair works are being effected from time to time. The remaining roads belongs to Village Panchayats and Taluk Developments Boards.

(c) As the existing 30 roads of Village Panchayats and Taluk Development Boards do not come under the jurisdiction of Public Works Department, the repair works of these roads could not be undertaken by the Public Works Department.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಡೆ — ಶರಾವತಿ ಯೋಜನೆಯಿಂದ ಮುಳುಗಡೆಯಾಗಿ ಅತ್ಯಂತ ಕಷ್ಟದಲ್ಲಿರತಕ್ಕ ಜನರಿಗೆ ಸರ್ಕಾರ ಎಲ್ಲ ಸೌಲಭ್ಯಗಳನ್ನು ಮಾಡುತ್ತದೆಂದು ಹೇಳಿತ್ತು. ಆದರೆ ಆ ರಸ್ತೆಗಳು ಈಗ ಸಂಚಾರಕ್ಕೆ ಅಯೋಗ್ಯವಾಗಿದ್ದರೂ ಅವುಗಳನ್ನು ಲೋಕೋಪಯೋಗಿ ಇಲಾಖೆ ಮತಿಯಿಂದ ದುರಸ್ತಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದೀರಿ. ಅಲ್ಲಿನ ಪರಿಸ್ಥಿತಿ ಏನು ಎಂಬುದು ನಮ್ಮ ಮಾನ್ಯ ಸಚಿವರಿಗೆ ಗೊತ್ತಿದೆ. ಆದ್ದರಿಂದ ಈ ರಸ್ತೆಗಳ ದುರಸ್ತಿ ಕಾರ್ಯವನ್ನು ಕೂಡಲೆ ಮಾಡಿಸಲು ವ್ಯವಸ್ಥೆ ಮಾಡುತ್ತೀರಾ ? ನಮಗೆ ಸ್ಪಷ್ಟವಾಗಿ ಉತ್ತರ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಪುನರ್ವಸತಿ ಯೋಜನೆಯಲ್ಲಿ ಮಾಡಿರತಕ್ಕ ರಸ್ತೆಗಳು. ಇದರಲ್ಲಿ ೩೪ ರಸ್ತೆಗಳಿವೆ. ಇವುಗಳ ಪೈಕಿ ೨ ರಸ್ತೆಗಳು ಸಾಗರ ತಾಲೂಕು, ಮತ್ತು ಇನ್ನೆರಡು ರಸ್ತೆಗಳು ಹೊಸನಗರ ತಾಲೂಕುಗಳಲ್ಲಿವೆ. ೧೯೭೫-೭೬ರಲ್ಲಿ ಇವು ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಇವುಗಳನ್ನು ನಿರ್ವಹಿಸುತ್ತಿದ್ದೇವೆ. ಉಳಿದಿರತಕ್ಕ ರಸ್ತೆಗಳ ವಿಚಾರದಲ್ಲಿ ಹೇಳುವುದಾದರೆ, ಹಿಂದೆ ನಾನು ತಾಲೂಕು ಬೋರ್ಡ್ ಅಧ್ಯಕ್ಷನಾಗಿದ್ದಾಗಲೂ ಈ ವಿಚಾರ ಬಂದಿತ್ತು. ಎಲ್ಲಿ ಒಂದು ಗ್ರಾಮಕ್ಕೆ ಸಂಪರ್ಕ ಕಲ್ಪಿಸತಕ್ಕ ರಸ್ತೆ ಇದೆ ಅದನ್ನು ಆಯಾಯ ಪಂಚಾಯಿತಿಗೂ, ಮತ್ತು ೨ ಗ್ರಾಮಗಳನ್ನು ಸಂಪರ್ಕ ಮಾಡತಕ್ಕ ರಸ್ತೆಗಳನ್ನು ಆಯಾಯ ತಾಲ್ಲೂಕು ಬೋರ್ಡಿಗೂ ವಹಿಸಿಕೊಡಬೇಕೆಂದು ಸರ್ಕಾರದ ನಿರ್ದೇಶನ ಕೂಡ ಇದೆ. ಆ ಪ್ರಕಾರ ಪಂಚಾಯಿತಿ ಮತ್ತು ತಾಲೂಕು ಬೋರ್ಡ್‌ನ ಅಭಿಪ್ರಾಯವನ್ನು ನಾವು ಕೇಳಿದಾಗ ಇದಕ್ಕೆ ಅವರು ಹಣವನ್ನು ಕೊಟ್ಟರೆ ಮಾತ್ರ ನಾವು ವಹಿಸಿಕೊಳ್ಳುತ್ತೇವೆ, ಇಲ್ಲದಿದ್ದರೆ ವಹಿಸಿಕೊಳ್ಳುವುದಿಲ್ಲವೆಂದು ಹೇಳಿದ್ದರು. ಹೀಗಾಗಿ ಅವರು ಇದನ್ನು ತೆಗೆದುಕೊಳ್ಳಲಿಲ್ಲ. ಪಿ. ಡಬ್ಲ್ಯೂ.ಡಿ ಗೆ ವಹಿಸಿಕೊಂಡಿರತಕ್ಕ ರಸ್ತೆಯನ್ನು ಪೊರತಾಗಿರತಕ್ಕ ರಸ್ತೆಗಳನ್ನು ಮೇಲ್ದರ್ಜೆ ಚಾರಣೆ ಮಾಡತಕ್ಕ ಕೆಲಸ ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ.

ಸ್ವಾಮಿ, ರಸ್ತೆಗಳನ್ನು ಇಲಾಖೆಗೆ ಸೇರಿಸಿ ಕೊಳ್ಳತಕ್ಕಂಥ ಸಂದರ್ಭದಲ್ಲಿ ಈವತ್ತು ಯಾವ ಒಂದು ಪ್ರದೇಶಕ್ಕೆ ಸೀಮಿತವಾದ ರಸ್ತೆಗಳನ್ನು ಸೇರಿಸಿಕೊಳ್ಳಬೇಕೆಂಬುದರ ಬಗ್ಗೆ ರಾಜ್ಯದ್ಯಂತ ಅನೇಕ ಭಾಗಗಳಲ್ಲಿ ಇರತಕ್ಕಂಥ ರಸ್ತೆಗಳನ್ನು ಸಮಗ್ರವಾಗಿ ಆಲೋಚನೆ ಮಾಡಬೇಕಾಗುತ್ತದೆ. ೧-೨ ಸೀಮಿತವಾಗಿ ತೆಗೆದುಕೊಂಡರೆ ರಾಜ್ಯದ ಅನೇಕ ಜನರಿಗೆ ನಿಷ್ಪ್ರಯೋಜಕ್ಕೆ ಗುರಿಯಾಗಬೇಕಾಗುತ್ತದೆ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನು ಕಳಕಳಿ ಇರುತ್ತದೋ ಅದನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇನೆ.

ಶ್ರೀ ಶಿರ್ನಾಳಿ ಚಂದ್ರಶೇಖರ್.—ಕಳೆದಸಾರಿ ಮಾನ್ಯ ಬಂಗಾರಪ್ಪನವರು ಪಿ. ಡಬ್ಲ್ಯು.ಡಿ. ಮಂತ್ರಿಗಳಾಗಿದ್ದಾಗ ಶರಾವತಿಗೆ ಮಾಡಿದಂಥ ರಸ್ತೆಗಳೆಲ್ಲವನ್ನು ತಕ್ಷಣವೇ ಪಿ. ಡಬ್ಲ್ಯು. ಡಿ, ಡಿಪಾರ್ಟ್‌ಮೆಂಟ್ ನವರು ತೆಗೆದುಕೊಂಡು ಮೆಂಟೆನೆನ್ಸ್‌ಗೆ ಹಣವನ್ನೂ ಕೂಡ ಮಂಜೂರು ಮಾಡುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ಅದು ತಮಗೂ ಕೂಡ ಗೊತ್ತಿದೆ. ಈಗ ಇರತಕ್ಕಂಥ ಸಮಸ್ಯೆ ಪಿ.ಡಬ್ಲ್ಯು.ಡಿ. ಯವರು ರಸ್ತೆಗಳ ದುರಸ್ತಿ ಕಾರ್ಯವನ್ನು ಮಾಡುತ್ತಿಲ್ಲ. ತಾಲ್ಲೂಕ್ ಬೋರ್ಡ್‌ನವರೂ ಕೂಡ ರಸ್ತೆಗಳ ದುರಸ್ತಿಕಾರ್ಯವನ್ನು ಮಾಡುತ್ತಿಲ್ಲ ಇದರ ವ್ಯವಸ್ಥೆಗಾಗಿ ಲಕ್ಷಗಟ್ಟಲೆ ಖರ್ಚು ಮಾಡಿದಂಥ ರಸ್ತೆಗಳ ಮೆಂಟೆನೆನ್ಸ್‌ಗೆ ಏನು ಮಾಡುತ್ತೀರಿ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದಿನ ಸರ್ಕಾರ ಆಶ್ವಾಸನೆಯನ್ನು ಕೊಟ್ಟಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿಲ್ಲ. ಅದು ನಮ್ಮ ದಾಖಲೆಯಲ್ಲಿ ಕಂಡುಬಂದ ಪಕ್ಷದಲ್ಲಿ. ಕೊಟ್ಟಿದ್ದಪಕ್ಷದಲ್ಲಿ ಅದನ್ನು ಸರ್ಕಾರದವರು ಗಣನೆಗೆ ತೆಗೆದುಕೊಂಡು ಅದನ್ನು ಅನುಸರಿಸಿ ಪರಿಶೀಲನೆ ಮಾಡಲಾಗುತದೆಂದು ಹೇಳುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ ಬೇರೆಯವರು ಉತ್ತರ ಕೊಟ್ಟಿದ್ದರೆ ಸಮಾಧಾನ ಪಟ್ಟುಕೊಳ್ಳಬಹುದಾಗಿತ್ತು. ಪರಿಸ್ಥಿತಿ ಗೊತ್ತಿರತಕ್ಕಂಥ ಮಂತ್ರಿಗಳೇ.....

ಅಧ್ಯಕ್ಷರು.— ಅದೇ ಬಂದಿರತಕ್ಕಂಥ ಕಷ್ಟ ಅವರು ಅದೇ ಊರಿನವರು, ತಾವು ಕೂಡ ಅದೇ ಊರಿನವರು.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಶರಾವತಿ ಯೋಜನೆ ಕೆಳಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅದರ ಮೆಂಟೆನೆನ್ಸ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದರೆ ಇದು ವಿಷಾದಕರವಾದ ವಿಷಯ. ದಯವಿಟ್ಟು ಮಾನ್ಯ ಸಚಿವರು ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಒಂದು ತಾಲ್ಲೂಕಿನ ಮಂತ್ರಿಯಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ರಸ್ತೆಗಳ ಜವಾಬ್ದಾರಿಯನ್ನು ಹೊತ್ತು ಜಾಗರೂಕತೆಯಿಂದ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಆದರೆ ಅಲ್ಲಿರತಕ್ಕಂಥ ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರ ಮನವರಿಕೆ ಏನು ಇರುತ್ತದೆ, ಅದನ್ನು ಪರಿಹರಿಸತಕ್ಕಂಥ ಕಾಲದಲ್ಲಿ ನಾವು ಸಮಗ್ರ ದೃಷ್ಟಿಯಿಂದ ನೋಡಬೇಕಾಗಿರುತ್ತದೆ. ನಮ್ಮ ತಾಲ್ಲೂಕಿಗೆ ಆಗುತ್ತದೆ ಎನ್ನುವ ದೃಷ್ಟಿಯಿಂದ ನೋಡಲು ಸಾಧ್ಯವಿಲ್ಲ.

ಶ್ರೀ ಶಿರ್ನಾಳಿ ಚಂದ್ರಶೇಖರ್.—ರಾಜ್ಯದ ಎಲ್ಲ ಭಾಗಗಳಲ್ಲಿಯೂ ಈ ಸಮಸ್ಯೆ ಇರುವುದಿಲ್ಲ. ಈ ಸಮಸ್ಯೆ ಇಲ್ಲಿ ಮಾತ್ರ ಇರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಎಲ್ಲಾ ಕಡೆಯೂ ಇರುತ್ತದೆ. ಘಟಪ್ರಭಾ ಯೋಜನೆ, ಮಲಪ್ರಭಾ ಯೋಜನೇ ಕಾಳಿನದಿ ಯೋಜನೆ ಈ ಏಲ್ಲ ಯೋಜನೆಗಳಿಂದ ಮುಳುಗಡೆಯಾಗಿರತಕ್ಕಂಥ ಪ್ರದೇಶಗಳೆಲ್ಲೆಲ್ಲ ಪುನರ್ ವ್ಯವಸ್ಥೆಯ ಕಾರ್ಯಕ್ರಮದ ಒಂದು ನೀತಿಯನ್ನು ಅನುಸರಿಸಿ ಮಾಡಬೇಕಾಗಿರುತ್ತದೆ.ಇಲ್ಲದಿದ್ದರೆ ಬೇರೆ ಜನರು ಟೀಕೆ ಮಾಡತಕ್ಕಂಥದ್ದಕ್ಕೆ ಅವಕಾಶವಾಗುತ್ತದೆ. ರಸ್ತೆಗಳನ್ನು ದುರಸ್ತಿ ಮಾಡಬೇಕು, ಅದರೆಲ್ಲೇನು ಭಿನ್ನಾಭಿಪ್ರಾಯವಿಲ್ಲ. ಆದನ್ನು ಯಾವ ರೀತಿ ಮಾಡಬೇಕು ಎನ್ನುವ ಬಗ್ಗೆ ಮಾನ್ಯ ಸದಸ್ಯರನ್ನೇ ಕರೆಸಿ ಆಲೋಚನೆ ಮಾಡಿ ಪ್ರಯತ್ನ ಮಾಡತ್ತೇನೆಂದು ತಿಳಿಸಬಯಸುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಡೆ.—ಮಾನ್ಯ ಅಧ್ಯಕ್ಷರೇ ನಾವೇನು ಬಾರು ರಸ್ತೆಗಳನ್ನು ಮಾಡಿ ಕೊಡಿ ಎಂದು ಕೇಳುತ್ತಿಲ್ಲ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆಗಳನ್ನು ಮಾಡಿರ ತಕ್ಕಂಥದ್ದು ರಿಪೇರಿ ಮಗೈರೆ ಇಲ್ಲದೆ ಹಾಳಾಗುತ್ತಿರುವುದರಿಂದ, ಕೊನೆ ಪಕ್ಷ ಸಂಚಾರಕ್ಕೆ ಯೋಗ್ಯವಾಗು ವಂತಾದರೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ತೊಂದರೆ ಏನು ಬರುತ್ತದೆಂದರೆ ಹಣವನ್ನು ಖರ್ಚು ಮಾಡಬೇಕಾದರೆ ಯಾವ ರೀತಿ ಮಾಡಬೇಕು ಎನ್ನುವುದು ಪ್ರಶ್ನೆ ಬರುತ್ತದೆ. ಇಲಾಖೆಯಲ್ಲಿ ಸೇರಿಸಿರ ತಕ್ಕಂಥ ರಸ್ತೆಗಳೆಂದು ನೇರವಾಗಿ ಖರ್ಚು ಮಾಡಬೇಕೇ, ಅಥವಾ ಎನ್‌ಆರ್‌ಇಪಿ ಪ್ರೋಗ್ರಾಮ್, ಬರಗಾಲ ಸ್ಕೇರ್‌ಸಿಟಿ ವಿರಿಯಾ ಎಂದು ಹೇಳಿ ಯಾವ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಮಾಡಬೇಕೆಂಬು ದನ್ನು ನೋಡಿ ಕಂಡಿತವಾಗಿಯೂ ಇತ್ತಕಡೆ ಗಮನಹರಿಸುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ.

Plan for uudergrouud drainage in Savadathi Town

755. Sri G.K. Takked (Parasgad).—Will the Minister for Housing and Urban Development be pleased to state.—

(a) whether it has come to the notice of Government that the works of underground drainage Scheme has not completed so far, at Saundathi Town area Belgaum, though the works were being carried on for about last 20 years;

(b) the reasons for the delay and the amount spent in this behalf;

(c) the amount still to be spent;

(d) when this work would be completed ?

Sri Dharam Singh Narayana Singh (Minister for Housing and Urban Development).—

(a) Yes.

(b) As the 'Sewage treatment work'' (Puragative) Centre is coming up at the Malaprabha Reservoir area, it was necessitated to shift this Scheme to some other higher place. Therefore, this work was not taken up. The approximate amount spent on this underground drainage Scheme from 1958 to 1964 is Rs. 3,02,727.

(c) A sum of about Rs. 25 to Rs, 26 lakhs is required to complete this project.

(d) The city corporation has to remit full amount to complete this work. If the above mentioned amount is remitted fully, the work is likely to be completed within 3 years in the ordinary course.